ಅಸಲು ದಾವಾ ಸಂಖ್ಯೆ 51/2022

ಪ್ರಾಸಾ-1

**ದಿನಾಂಕ 24.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಶ್ರೀ ಟಿ.ಎಂ.ಎಸ್. 2ನೇ ಪ್ರತಿವಾದಿಯ ಪರ ವಕೀಲರಿಂದಃ-**

ದಾವಾ ಎ ಅನುಸೂಚಿ ಆಸ್ತಿಗಳು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿಗಳು ಎಂದರೆ ಸರಿ. ಆ ಆಸ್ತಿಗಳಲ್ಲಿ ನನ್ನ ತಂದೆ ಬದುಕಿದ್ದಾಗ ವಿಭಾಗವಾಗಿರಲಿಲ್ಲ ಎಂದರೆ ಸರಿ. ಹಾಗಾಗಿ, ಆ ಆಸ್ತಿಗಳಲ್ಲಿ ನನ್ನ ತಂದೆಯ ವಾರಸುದಾರರಿಗೆ ಹಕ್ಕು ಇದೆ ಎಂದರೆ ಸರಿ.

2ನೇ ಪ್ರತಿವಾದಿಯು ದಿನಾಂಕ 16.09.1993 ರಂದು ತನ್ನ ಸ್ವಂತ ಆದಾಯದಿಂದ ದಾವಾ ಬಿ ಅನುಸೂಚಿ ಆಸ್ತಿಗಳ ಕ್ರಮ ಸಂಖ್ಯೆ 5ನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ, ನನ್ನ ತಂದೆ ಖರೀದಿಸಿದ್ದರು. ಆ ಆಸ್ತಿಯ ಖಾತೆಯು ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ಹೊರತುಪಡಿಸಿ ದಾವಾ ಬಿ ಅನುಸೂಚಿ ಆಸ್ತಿಗಳ ಉಳಿದ ಎಲ್ಲಾ ಆಸ್ತಿಗಳಲ್ಲಿ ಈ ಪ್ರಕಣದ ಪಕ್ಷಗಾರರಿಗೆ ಹಕ್ಕು ಇದೆ ಎಂದರೆ ದಾವಾ ಬಿ ಅನುಸೂಚಿಯ ಎಲ್ಲಾ ಆಸ್ತಿಗಳಲ್ಲಿ ಹಕ್ಕು ಇದೆ.

ದಾವಾ ಬಿ ಅನುಸೂಚಿ ಆಸ್ತಿಯ ಕ್ರಮ ಸಂಖ್ಯೆ 5ರ ಆಸ್ತಿಯು 2ನೇ ಪ್ರತಿವಾದಿಯ ಸ್ವಂತ ಆಸ್ತಿಯಾಗಿರುವುದರಿಂದ ಅದರಲ್ಲಿ ವಿಭಾಗ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆ ಆಸ್ತಿಯ ಸ್ವಾಧೀನದಲ್ಲಿ 2ನೇ ಪ್ರತಿವಾದಿ ಇದ್ದು, ಅದನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**

**ತಿ.ನರಸೀಪುರ**